ಓ.ಎಸ್.ನಂ.18/2024

ದಿನಾಂಕಃ 24-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಸಂಗತಿಗಳನ್ನು ನಾನೇ ಹೇಳಿ ಬರೆಸಿದ್ದು ಅವುಗಳು ಸತ್ಯವಾಗಿವೆ ಮತ್ತು ಅದಕ್ಕೆ ನಾನು ನನ್ನ ರುಜುವನ್ನು ಹಾಕಿದ್ದೇನೆ.

ನನಗೆ ವಾದಿ ಮತ್ತು ರಾಮಕೃಷ್ಣಪ್ಪ ಗೊತ್ತು. ಸದರಿ ರಾಮಕೃಷ್ಣರವರು ಮೃತ ಪಟ್ಟಿರುತ್ತಾರೆ. 1 ರಿಂದ 4 ನೇ ಪ್ರತಿವಾದಿಯವರು ಮೃತ ರಾಮಕೃಷ್ಣಪ್ಪರವರ ಹೆಂಡತಿ ಮತ್ತು ಮಕ್ಕಳಾಗಿರುತ್ತಾರೆ. ನಿಪಿ-1 ದಾಖಲೆಯನ್ನು ವಾದಿಯವರಿಗೆ ಮೃತ ರಾಮಕೃಷ್ಣಪ್ಪರವರು ಸಾಲ ಪಡೆದುಕೊಂಡ ಬಗ್ಗೆ ಮಾಡಿಕೊಟ್ಟಿರುತ್ತಾರೆ. ಸದರಿ ದಾಖಲೆಗೆ ಮೃತ ರಾಮಕೃಷ್ಣಪ್ಪರವರು ತಮ್ಮ ಸಹಿಯನ್ನು ಮಾಡಿರುತ್ತಾರೆ. ಸಾಕ್ಷಿ ಮೃತ ರಾಮಕೃಷ್ಣಪ್ಪರವರ ಸಹಿಯನ್ನು ನೋಡಿ ಒಪ್ಪಿದ ಮೇರೆಗೆ ರಾಮಕೃಷ್ಣಪ್ಪರವರ ಸಹಿಯನ್ನು ನಿಪಿ-1(ಎ) ಮತ್ತು ನಿಪಿ-1(ಬಿ) ಎಂದು ಗುರುತಿಸಲಾಯಿತು. ನಿಪಿ-1 ದಾಖಲೆಗೆ ನಾನು ಸಾಕ್ಷಿದಾರರಾಗಿ ಸಹಿ ಮಾಡಿರುತ್ತೇನೆ. ನಿಪಿ-1 ರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ತನ್ನ ಸಹಿ ಎಂದು ಒಪ್ಪಿದ ಮೇರೆಗೆ ನಿಪಿ-1(ಬಿ) ಎಂದು ಗುರುತಿಸಲಾಯಿತು. ನಿಪಿ-1 ದಾಖಲೆಯನ್ನು ವಾದಿಯವರು ಬರೆದಿರುತ್ತಾರೆ. ಆದ್ದರಿಂದ ಪ್ರತಿವಾದಿಯ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಕೋರಿಕೆ.

**(ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

(ಜಯಲಕ್ಷ್ಮೀ ಎನ್.ಬಿ.)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್